PUBLIC ACCOUNTS COMMITTEE

Appointment of Chairman.

Mr. SPEAKER:—Under sub-rule (3) of rule 196 of the Rules of Procedure and Conduct of Business in the Mysore Legislative Assembly, I have nominated Sri S. D. Kothavale as Chairman of the Public Accounts Committee.

Now the subject is Call Attention Notice by Sri L. Srikantaiah.....

Members' Representations

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಗೊತ್ತಿರುವ ಹಾಗೆ ವಿವರಣೆಯನ್ನೇನೋ ಕೊಟ್ಟರು. ಆದರೆ ಅದರಿಂದ ನಮಗೆ ಸಮಾಧಾನವಾಗಲಿಲ್ಲ.

ಅಧ್ಯಕ್ಷರು.—ತಾವೇ ಸರಕಾರದವರ ಕಡೆಯಿಂದ ವಿವರಗಳು ಬೇಕೆಂದು ಕೇಳಿದಿರಿ ಈಗ ಹೀಗೆ ಹೇಳಿದರೆ ನನಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ವಿರೋಧ ಪಕ್ಷದ ಸದಸ್ಯರು ಹೀಗೆ ಹೇಳುತ್ತಾರೆಂತಲೋ ?

ಅಧ್ಯಕ್ಷರು.—ತಾವೊಬ್ಬರೇ ವಿರೋಧ ಪಕ್ಷದ ಸದಸ್ಯರಲ್ಲ. ವಿರೋಧ ಪಕ್ಷದ ನಾಯಕರು ಹಾಗೂ ಇತರರೂ ಇದ್ದಾರೆ. ಅವರನ್ನೂ ಕೇಳಬೇಕು. ತಾವು ಪ್ರತಿ ಹೆಜ್ಜೆ ಹೆಜ್ಜೆಗೂ ಎದ್ದು ಈ ರೀತಿ ಮಾಡಬಾರದು.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳುತ್ತಿರುವುದು..... .....

Mr. SPEAKER.—Order, order... .....

ಶ್ರೀ ಎಸ್. ಗೋಪಾಲಗೌಡ.—ತಾವು ಈ ರೀತಿ ಆಕ್ಷೇಪಣೆ ಮಾಡುವುದು ಸರಿಯಲ್ಲ.

Mr. SPEAKER.—Order, order. ಮಾನ್ಯ ಗೋಪಾಲಗೌಡರು, ಸ್ವಲ್ಪ ಸಮಾಧಾನದಿಂದ ಕೇಳಬೇಕು. ನುಮಾರು ನಾಲ್ಕೂವರೆ ಗಂಟೆಯ ಕಾಲ ಈ ಒಂದು ಪ್ರಶ್ನೆಯ ಬಗ್ಗೆ ಇಷ್ಟೆಲ್ಲಾ ಚರ್ಚೆಯಾಗಿ ವಿವರಣೆ ಕೊಟ್ಟನಂತರವೂ ತಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನಾನೇನು ಮಾಡುವುದಕ್ಕಾಗುತ್ತದೆ ? ಈ ಪ್ರಕಾರವಾಗಿ ತಪ್ಪು ತಪ್ಪು ಭಾವನೆಗಳಿಂದ ಹೇಳುವುದನ್ನು ಸರಿತುಬಿಡುವುದು ಒಳ್ಳೆಯದು. ನಾನು ವಿಧಾನವನ್ನು ತಮಗೆ ತಿಳಿಸಿದ್ದೇನೆ.

ಎರಡನೆಯದು, ನಿಮಗೆ ಇಷ್ಟ ಬಂದ ಪ್ರಕಾರ ಒಂದು ಸಾರಿಯಿಲ್ಲ, ಎರಡು ಸಾರಿ ಹಾಗೂ ಇತರರಿಗೆ ಅವಕಾಶ ಕೊಟ್ಟುದು ತಪ್ಪು ಎಂದು ತಾವು ನಿರ್ಣಯಕ್ಕೆ ಬರುವುದಾದರೆ ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವು ಇಲ್ಲಿ ಹೇಳುತ್ತಿರುವುದು ಇದೇನು ರೂಲಿಂಗೋ ಅಥವಾ ನಮಗೆ ಬುದ್ಧಿವಾದವೋ, ತಿಳಿಯುತ್ತಿಲ್ಲ.

ಅಧ್ಯಕ್ಷರು.—ತಾವು ಇದನ್ನು ಹೇಗೆ ಬೇಕಾದರೂ ತಿಳಿದುಕೊಳ್ಳಬಹುದು. ಅದಕ್ಕೆ ನನ್ನ ಅಡ್ಡಿಯಿಲ್ಲ.

†ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಏನು ತಾವಿಷ್ಟು ಕೋಪದಿಂದ ಮಾತಾಡುತ್ತಿದ್ದೀರಿ ? ನಾವು ಇಲ್ಲಿ ಇರಬೇಕೋ ಬೇಡವೋ ಎಂದನಿಸುತ್ತಿದೆ. ಹೀಗೆಲ್ಲಾ ಮಾತಾಡಬಾರದು. ಸ್ಪೀಕರ್ ಆಗಿದ್ದಾರೆಂದು ತಮಗೆ ಇಷ್ಟಬಂದಂತೆ ಮಾಡಬಹುದು. ತಪ್ಪಾಗಿದೆ ಎಂದು ಇಲ್ಲಿ ಹೇಳಿ ಅದನ್ನು ಅವರಿಗೆ ಸಮಾಧಾನವಾಗುವಂತೆ ಹೇಳಿ ಸಮಾಧಾನ ಮಾಡುವುದು ನಿಮ್ಮ ಕರ್ತವ್ಯ. ಇಲ್ಲಿಯ ಸದಸ್ಯರನ್ನು ತಾವು ಮಕ್ಕಳಂತೆ ಕಾಣುವುದು ಗೌರವವಲ್ಲ. ಮಕ್ಕಳಂತೆ ನಾವು ಇಲ್ಲಿಗೆ ಬಂದಿಲ್ಲ. ತಾವು ಇಲ್ಲಿ ಇಷ್ಟು ಜಬರ್‌ದಸ್ತಿನಿಂದ ಮಾತನಾಡಿದರೆ ನಾವೂ ಅದೇ ರೀತಿ ಜಬರ್‌ದಸ್ತಿನಿಂದಲೇ ಮಾತನಾಡಬೇಕಾಗಿ ಬರುತ್ತದೆ. ನೀವು ದಯವಿಟ್ಟು ಗಂಭೀರವಾಗಿ ಹೇಳಿದರೆ ಅವರೂ ಸಮಾಧಾನದಿಂದ ಹೇಳುತ್ತಾರೆ ಮತ್ತು ಗಂಭೀರವಾಗಿ ಹೇಳುತ್ತಾರೆ. ಅವರೂ ಒಂದು ಪಾರ್ಟಿ